


ಸ್ಕೈಡೈವಿಂಗ್ ಸಾಹಸಕ್ರೀಡೆಗೆ ಅಪ್ಪ–ಮಗಳು ರೆಡಿ

ಮೊದಲು ಅಪ್ಪನ ಸರದಿ. ಮನದಲ್ಲೇ ಪ್ರಾರ್ಥನೆ ಮಾಡುತ್ತಾ ಅಪ್ಪನ ಈ ಸಾಹಸದಲ್ಲಿ ಯಾವ ದುರ್ಘಟನೆಯೂ ನಡೆಯದೆ ಅವರ ಜೀವನದಲ್ಲಿ ಒಂದು ಸಿಹಿ ನೆನಪಾಗಿ ಉಳಿಯಲಿ ಎಂದು ಬೇಡಿಕೊಂಡೆ. ಆತಂಕದಿಂದಲೇ ಅಪ್ಪನತ್ತ ನೋಡುತ್ತಿದ್ದೆ. ಆದರೆ ಅಪ್ಪ ಮಾತ್ರ ಯಾವುದೇ ಅಂಜಿಕೆಯಿಲ್ಲದೆ ಸಮಚಿತ್ತದಿಂದ ಆ ಕ್ಷಣಗಳನ್ನು ಅನುಭವಿಸುತ್ತಿದ್ದರು. ಅವರ ಆ ಧೈರ್ಯ ಹಾಗೂ ಬದುಕನ್ನು ನೋಡುವ ರೀತಿ ಕಂಡ ನನಗೆ ಅಚ್ಚರಿಯಾಗಿತ್ತು. 'ಯಾವುದೇ ಕಾರ್ಯವಾಗಲೀ, ಅದು ನಮಗೆ ಎಷ್ಟು ಕಠಿಣವಾಗಿ ಅನ್ನಿಸುತ್ತದೆಯೋ ಅಷ್ಟೇ ಕಠಿಣವಾಗಿರುತ್ತದೆ' ಎನ್ನುವ ಪಾಠ ಕಲಿಸಿತು.

ಸ್ಕೈಡೈವರ್ ಜೊತೆ ಅಪ್ಪ ಬಾನಿಗೆ ನೆಗೆಯುತ್ತಲೇ, ನಾನು ಹಾಗೂ ನನ್ನ ಜೊತೆಯಿರುವ ಸ್ಕೈಡೈವರ್ ನಮ್ಮಿಬ್ಬರ ನಡುವೆ ಇರುವ ಕೊಂಡಿಗಳನ್ನು ಖಚಿತಪಡಿಸಿಕೊಂಡು ತೆವಳುತ್ತ ವಿಮಾನದ ಬಾಗಿಲ ತುದಿಗೆ ಬಂದೆವು. ಸ್ಕೈಡೈವರ್ ನನ್ನ ಕೈಯನ್ನು ಕ್ರಾಸ್ ಮಾಡಿರಲು ತಿಳಿಸಿ, 'ಜಂಪ್ ಮಾಡಲು ಸಿದ್ಧವಾಗಿ' ಎಂದರು. ಮುಖವನ್ನು ಆಕಾಶದತ್ತ ನೋಡುತ್ತ ನಾವಿಬ್ಬರು ವಿಮಾನದಿಂದ ಏಕಾಏಕಿ ಜಿಗಿದೆವು.

ಸುಮಾರು 5 ಸೆಕೆಂಡ್‌ಗಳ ತನಕ ಗಾಳಿಯಲ್ಲಿ ಒಂದು ಸುತ್ತು ಹಾಕಿ ಬಾಳೆಹಣ್ಣಿನ ಸ್ಥಿತಿಯಲ್ಲಿ ನಾವು 180 ಕಿ.ಮೀ. ವೇಗದಲ್ಲಿ ಭೂಮಿಗೆ ಬೀಳುತ್ತಿದ್ದೆವು. ಆ ಗಾಳಿಯ ವೇಗಕ್ಕೆ ನಮ್ಮ ನರನಾಡಿಗಳೆಲ್ಲ ಎದ್ದು ಕಾಣುತ್ತಿತ್ತು. ಆ ಎಲ್ಲ ಕ್ಷಣಗಳನ್ನು ಸ್ಕೈಡೈವರ್ ಕೈಯಲ್ಲಿದ್ದ ಕ್ಯಾಮೆರಾ ಸೆರೆಹಿಡಿಯುತ್ತಿತ್ತು.



ಬಾನಿನಿಂದ ಬುವಿಯ ಸುಂದರ ನೋಟ

ಸ್ಕೈಡೈವಿಂಗ್ ಮಾಡುವಾಗ ವಿಮಾನದಿಂದ ಬಿದ್ದ ಮೊದಲ 5 ಸೆಕೆಂಡ್‌ಗಳಲ್ಲಿ ಮಾತ್ರ ನಮಗೆ ಭಾರರಹಿತ ಅನುಭವವಾಗುತ್ತದೆ. ಈ ಅನುಭವ ದೊಡ್ಡ ಜೈಂಟ್ ವೀಲ್‌ನಲ್ಲಿ ಕುಳಿತಾಗ ಕೂಡ ಆಗಿರುತ್ತದೆ. ಆದರೆ ಬೀಳಲು ಆರಂಭಿಸಿದಾಗ ನಮಗೆ ಯಾವುದೇ ಭಾರರಹಿತ ಅನುಭವವಾಗುವುದಿಲ್ಲ.

ಹೀಗೆ 180 ಕಿ.ಮೀ. ವೇಗದಲ್ಲಿ ಬೀಳುತ್ತಿದ್ದ ನಮಗೆ ಭೂಮಿಯ ಮೇಲಿರುವ ಕಟ್ಟಡಗಳು, ಗದ್ದೆಗಳು ಒಂದೊಂದಾಗಿ, ಕ್ರಮೇಣ ದೊಡ್ಡದಾಗಿ ಕಾಣಲು ಶುರುವಾದವು. ಭಯ ಹಾರಿಹೋಗಿತ್ತು. ಆಕಾಶದಿಂದ ಭೂಮಿಯ ಸೌಂದರ್ಯ ಸವಿಯುವುದು ಎಂಥ ಅದೃಷ್ಟ!

ಸ್ಕೈಡೈವಿಂಗ್‌ನಲ್ಲಿ ಸುಮಾರು 60 ಸೆಕೆಂಡುಗಳ ತನಕ ನಾವು 180 ಕಿ.ಮೀ. ವೇಗದಲ್ಲಿ 15 ಸಾವಿರ ಅಡಿ ಎತ್ತರದಿಂದ 5 ಸಾವಿರ ಅಡಿ ಎತ್ತರದವರೆಗೆ ಕಲ್ಲು ಬಿದ್ದಂತೆ ಬೀಳುತ್ತಿರುತ್ತೇವೆ. ಇದು ಸ್ಕೈಡೈವಿಂಗ್‌ನ ಅತ್ಯಂತ ರೋಚಕ ಕ್ಷಣಗಳು.

ನಮ್ಮ ಸ್ಕೈಡೈವರ್ ಕೈಯಲ್ಲಿರುವ ಎತ್ತರ ಮಾಪನ (altimeter) 5 ಸಾವಿರ ಅಡಿಗಳು ತೋರಿಸುತ್ತಿದ್ದಂತೆ, ಅವರು ಪ್ಯಾರಾಚ್ಯೂಟ್ ತೆರೆದರು. ಅಡ್ಡಲಾಗಿ ಬೀಳುತ್ತಿದ್ದ ನಾವಿಬ್ಬರು ಪ್ಯಾರಾಚ್ಯೂಟ್ ಸಹಾಯದಿಂದ ಗಾಳಿಯಲ್ಲಿ ನಿಲ್ಲುವ ಸ್ಥಿತಿಗೆ ಬಂದೆವು. ಆಗ ನನ್ನ ಜೊತೆಯಿದ್ದ ಸ್ಕೈಡೈವರ್, ನಮಗಿಂತ ಮೊದಲೇ ಜಂಪ್ ಮಾಡಿದ ನನ್ನ ತಂದೆ ಆಕಾಶದಲ್ಲಿ ಸಂತೋಷದಿಂದ ಹಾರಾಡುತ್ತಿದ್ದುದನ್ನು ತೋರಿಸಿದರು. ನನ್ನ ಜೀವನದಲ್ಲಿನ ಅತ್ಯಂತ ಮಧುರ ಕ್ಷಣವದು.

ಸ್ಕೈಡೈವಿಂಗ್‌ನಲ್ಲಿ ಪ್ಯಾರಾಚ್ಯೂಟ್ ತೆರೆದುಕೊಳ್ಳುವುದು ಒಂದು ಮಹತ್ವದ ಘಟ್ಟ. ಪ್ಯಾರಾಚ್ಯೂಟ್ ತೆರೆದುಕೊಳ್ಳದೇ ಸಾವು ಸಂಭವಿಸಿರುವ ಹಲವಾರು ನಿದರ್ಶನಗಳುಂಟು. ಸ್ಕೈಡೈವಿಂಗ್ ಕ್ಲಿಷ್ಟಕರವಾದ ಮೈಲುಗಲ್ಲನ್ನು ನನ್ನ ತಂದೆ ಹಾಗೂ ನಾನು ದಾಟಿಯಾಗಿತ್ತು. ಗಾಳಿಯಲ್ಲಿ ನಿಂತು ಭೂಮಿಯನ್ನು ಮನಸಾರೆ ನೋಡಿ ತಣಿದೆವು. ಲೋಕದ ಗೊಡವೆಗಳನ್ನೆಲ್ಲಾ ತೊರೆದು ಮನಸ್ಸು ಕೂಡ ಹಕ್ಕಿಯಂತಾಗಿತ್ತು. ಹಾರಾಡುವ ನಿಜವಾದ ಖುಷಿ ಅನುಭವಿಸಿದೆವು.

ಹೀಗೇ ಸ್ವಚ್ಛಂದವಾಗಿ ಹಾರಾಡುತ್ತಿದ್ದ ನಮಗೆ ನೆಲಕ್ಕಿಳಿಯುವ ಮನಸ್ಸೇ ಇರಲಿಲ್ಲ. ಆದರೆ ಸಮಯ ಕೇಳಬೇಕಲ್ಲ? ನಾವು ಭೂಮಿಗಿಳಿಯುವ ವೇಳೆಯಾಗಿತ್ತು.

'ನೆಲ ಮುಟ್ಟುವಾಗ ಕಾಲನ್ನು ಆದಷ್ಟು ಎತ್ತಿ ಹಿಡಿಯಬೇಕು. ಇಲ್ಲವಾದರೆ ನೆಲಕ್ಕೆ ಬೀಳುವ ರಭಸಕ್ಕೆ ಕ್ರ್ಯಾಶ್ ಲ್ಯಾಂಡಿಂಗ್ ಆಗುವ ಸಾಧ್ಯತೆಗಳಿವೆ' ಎಂಬ ಸ್ಕೈಡೈವರ್ ಎಚ್ಚರಿಕೆ ಮಾತನ್ನು ಪಾಲಿಸಿ ನೆಲಕ್ಕೆ ಪಾದವೂರಿದೆವು.

ಜೀವನದಲ್ಲಿ ಇಂಥದ್ದೊಂದು ರೋಮಾಂಚನಕಾರಿ ಅನುಭವವನ್ನು ನಾನು ಪಡೆದ ಹಾಗೂ ನನ್ನ ತಂದೆಗೆ ಕೊಟ್ಟ ಖುಷಿ ನನ್ನಲ್ಲಿ ತುಂಬಿಕೊಂಡಿತ್ತು.

ಪ್ರತಿಕ್ರಿಯಿಸಿ: feedback@sudha.co.in